## ರೇಷ್ಮೆ ಗೂಡು ಮಾರುಕಟ್ಟೆಗಳು

ಕರ್ನಾಟಕ ರಾಜ್ಯವು ದೇಶದ ರೇಷ್ಮೆ ಉತ್ಪಾದನೆಯಲ್ಲಿ ಮೊದಲ ಸ್ಥಾನದಲ್ಲಿದೆ. ರಾಜ್ಯ ಸರ್ಕಾರವು ಕರ್ನಾಟಕ ರಾಜ್ಯ ರೇಷ್ಮೆ ಹುಳುವಿನ ಬಿತ್ತನೆ, ರೇಷ್ಮೆ ಗೂಡು ಮತ್ತು ರೇಷ್ಮೆ ನೂಲು(ಉತ್ಪಾದನೆ, ಸರಬರಾಜು, ವಿತರಣೆ ಮತ್ತು ಮಾರಾಟ ನಿಯಂತ್ರಣ) ಕಾಯಿದೆ 1959 ಹಾಗೂ ನಿಯಮಗಳು 1960ರನ್ವಯ ರೇಷ್ಮೆ ಬೆಳೆಗಾರರರು ಬೆಳೆದಂತಹ ರೇಷ್ಮೆ ಗೂಡುಗಳನ್ನು ಪಾರದರ್ಶಕವಾಗಿ ವಹಿವಾಟು ನಡೆಸಲು ಸರ್ಕಾರವು ರಾಜ್ಯದಲ್ಲಿ ಒಟ್ಟು 55 ರೇಷ್ಮೆ ಗೂಡಿನ ಮಾರುಕಟ್ಟೆಗಳನ್ನು ಅಧಿಸೂಚನೆಯ ಮೂಲಕ ಸ್ಥಾಪಿಸಲಾಗಿದೆ. ಈ ಮಾರುಕಟ್ಟೆಗಳಲ್ಲಿ 10 ಮೈಸೂರು ತಳಿ ಬಿತ್ತನೆ, 10 ದ್ವಿತಳಿ ಬಿತ್ತನೆ ಹಾಗೂ 35 ಮಿಶ್ರತಳಿ/ ವಾಣಿಜ್ಯ ಗೂಡು ಮಾರಾಟಕ್ಕಾಗಿ ತಳಿವಾರು ಪ್ರತ್ಯೇಕ ಮಾರುಕಟ್ಟೆಗಳನ್ನು ವಿಂಗಡಿಸಿ ವಹಿವಾಟು ನಡೆಸಲಾಗುತ್ತಿದೆ. ಜಿಲ್ಲಾವಾರು ರೇಷ್ಮೆ ಗೂಡಿನ ಮಾರುಕಟ್ಟೆ ವಿವರಗಳನ್ನು ಲಗತ್ತಿಸಿದೆ.

ವಾಣಿಜ್ಯ ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ರಾಮನಗರ, ಶಿಡ್ಲಘಟ್ಟ, ಕೊಳ್ಳೆಗಾಲ, ಕನಕಪುರ, ಕೋಲಾರ, ವಿಜಯಪುರ ಮತ್ತು ಚನ್ನಪಟ್ಟಣಗಳು ಪ್ರಮುಖವಾದ ಮಾರುಕಟ್ಟೆಗಳಾಗಿವೆ. ಒಟ್ಟು ಮಾರಾಟದ ಶೇ 80 ರಷ್ಟು ರೇಷ್ಮೆ ಗೂಡಿನ ವಹಿವಾಟು ಈ ಮಾರುಕಟ್ಟೆಗಳಲ್ಲಿ ಆಗುತ್ತದೆ. ಪ್ರತಿದಿನ ಈ ಮಾರುಕಟ್ಟೆಗಳಿಗೆ ರಾಜ್ಯದ ವಿವಿಧ ಭಾಗಗಳಿಂದ ಹಾಗೂ ಹೊರ ರಾಜ್ಯಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ರೇಷ್ಮೆ ಬೆಳೆಗಾರರು ರೇಷ್ಮೆ ಗೂಡನ್ನು ಮಾರಾಟ ಮಾಡಲು ಆಗಮಿಸುತ್ತಾರೆ ಹಾಗೂ ಈ ಜಿಲ್ಲೆಗಳಲ್ಲಿ ಹೆಚ್ಚಿನ ನೂಲು ಬಿಚ್ಚಾಣಿಕೆದಾರರು ಇರುವುದರಿಂದ ರೇಷ್ಮೆ ಗೂಡಿಗೆ ಗುಣಮಟ್ಟಕ್ಕನುಗುಣವಾಗಿ ಸ್ಪರ್ಧಾತ್ಮಕ ಬೆಲೆ ಲಭ್ಯವಾಗುತ್ತದೆ.

## ಮಾರುಕಟ್ಟೆಗಳಲ್ಲಿ ರೇಷ್ಮೆ ಗೂಡಿನ ವಹಿವಾಟು

ಕರ್ನಾಟಕ ರಾಜ್ಯ ರೇಷ್ಮೆ ಹುಳುವಿನ ಬಿತ್ತನೆ, ರೇಷ್ಮೆ ಗೂಡು ಮತ್ತು ರೇಷ್ಮೆ ನೂಲು(ಉತ್ಪಾದನೆ, ಸರಬರಾಜು, ವಿತರಣೆ ಮತ್ತು ಮಾರಾಟ ನಿಯಂತ್ರಣ) ಕಾಯಿದೆ 1959 ಹಾಗೂ ನಿಯಮಗಳು 1960 ರಡಿಯಲ್ಲಿನ ಸೆಕ್ಷನ್ 10 ರಡಿಯಲ್ಲಿ ಸರ್ಕಾರದ ಅಧಿಸೂಚನೆ ಮೂಲಕ ಸ್ಥಾಪನೆಗೊಂಡ ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ವಾಣಿಜ್ಯ ಗೂಡಿನ ವಹಿವಾಟನ್ನು ಬಹಿರಂಗ ಹರಾಜು/ ಇ-ಹರಾಜು ಮೂಲಕ ನಡೆಸಲಾಗುತ್ತಿದೆ.

ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿದ್ದ ಬಹಿರಂಗ ಹರಾಜು ಕೂಗುವ ಪದ್ಧತಿಯನ್ನು ಉನ್ನತೀಕರಿಸುವ ಉದ್ದೇಶದಿಂದ ರೇಷ್ಮೆ ಗೂಡಿನ ಹರಾಜಿನಲ್ಲಿ ಪಾರದರ್ಶಕತೆ ತರುವುದರ ಮೂಲಕ ಸ್ಪರ್ಧಾತ್ಮಕ ಧಾರಣೆಯನ್ನು ಭಾಗೀದಾರರಿಗೆ ದೊರಕಿಸಿಕೊಡಲು 2014-15 ನೇ ಸಾಲಿನಿಂದ ಇ-ಹರಾಜು ಪದ್ಧತಿಯನ್ನು ಜಾರಿಗೊಳಿಸಲಾಗಿದೆ.

ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆ, ಕೊಳ್ಳೇಗಾಲ, ರಾಮನಗರ, ಶಿಡ್ಲಘಟ್ಟ, ಕನಕಪುರ, ಕೋಲಾರ, ವಿಜಯಪುರ, ಚನ್ನಪಟ್ಟಣ, ಮಳವಳ್ಳಿ, ಹೆಚ್.ಕ್ರಾಸ್ ಮತ್ತು ಚಿಂತಾಮಣಿಗಳಲ್ಲಿ ಇ-

ಹರಾಜು ಪದ್ಧತಿಯನ್ನು ಪ್ರಾರಂಭಿಸಲಾಗಿದ್ದು ಯಶಸ್ವಿಯಾಗಿ ನಡೆಯುತ್ತಿದ್ದು, ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಪ್ರಸ್ತುತ ರಾಜ್ಯದ ಎಲ್ಲಾ ಮಾರುಕಟ್ಟೆಗಳಲ್ಲಿ ವಹಿವಾಟಾಗುವ ರೇಷ್ಮೆ ಗೂಡಿನಲ್ಲಿ ಶೇ ೯೦ಕ್ಕಿಂತಲೂ ಹೆಚ್ಚಿನ ಗೂಡು ಇ-ಹರಾಜು ಮೂಲಕ ವಹಿವಾಟಾಗುತ್ತಿದೆ.

**ರೇಷ್ಮೆ ಗೂಡಿನ ಮಾರಾಟ ಪ್ರಕ್ರಿಯೆ;**

**1. ರೇಷ್ಮೆ ಗೂಡಿನ ಒಳದಾಖಲಾತಿ:**

ರಾಜ್ಯದ ವಿವಿಧ ಭಾಗಗಳಿಂದ ಹಾಗೂ ಇತರೆ ರಾಜ್ಯಗಳಿಂದ ರೇಷ್ಮೆ ಬೆಳೆಗಾರರು ರೇಷ್ಮೆ ಗೂಡುಗಳನ್ನು ವಹಿವಾಟಿನ ಹಿಂದಿನ ದಿನ ಅಥವಾ ವಹಿವಾಟಿನ ದಿನದಂದು ಮಾರುಕಟ್ಟೆಗೆ ವಿವಿಧ ವಾಹನಗಳಲ್ಲಿ ತರುತ್ತಾರೆ. ರೇಷ್ಮೆ ಗೂಡನ್ನು ತಂದ ನಂತರ ಮಾರುಕಟ್ಟೆಯಲ್ಲಿರುವ ಕಬ್ಬಿಣದ ಜಾಲರಿಗಳಲ್ಲಿ ಹರಡಿಕೊಳ್ಳುತ್ತಾರೆ. ವಹಿವಾಟಿನ ದಿನದಂದು ತಂಡದ ಸಂಖ್ಯೆ ನೀಡಿ ಹರಾಜು ಚೀಟಿ ನೀಡಲಾಗುವುದು. ಈ ಹರಾಜು ಚೀಟಿಯ ಆಧಾರದ ಮೇಲೆ ರೇಷ್ಮೆ ಗೂಡಿನ ಹರಾಜನ್ನು ಕೈಗೊಳ್ಳಲಾಗುವುದು.

**2. ರೇಷ್ಮೆ ಗೂಡಿನ ಬಹಿರಂಗ/ಇ-ಹರಾಜು:**

**ಬಹಿರ0ಗ ಹರಾಜು**: ಪ್ರತಿದಿನ ಬೆಳಿಗ್ಗೆ ರೇಷ್ಮೆ ಗೂಡಿನ ಮಾರುಕಟ್ಟೆ ಸಮಿತಿಯು ನಿಗದಿಪಡಿಸಿದ ಸಮಯದಲ್ಲಿ ರೇಷ್ಮೆ ಗೂಡನ್ನು ಬಹಿರಂಗ ಹರಾಜಿಗೆ ಒಳಪಡಿಸಲಾಗುವುದು. ರೇಷ್ಮೆ ನೂಲು ಬಿಚ್ಚಾಣಿಕೆದಾರರು ರೇಷ್ಮೆ ಗೂಡುಗಳನ್ನು ಭೌತಿಕವಾಗಿ ಪರೀಕ್ಷೆ ಮಾಡುವುದರ ಮೂಲಕ ಸ್ಪರ್ಧಾತ್ಮಕವಾಗಿ ಬಹಿರಂಗ ಹರಾಜಿನಲ್ಲಿ ತಮ್ಮ ದರವನ್ನು ಕೂಗುತ್ತಾರೆ. ರೇಷ್ಮೆ ಬೆಳೆಗಾರರ ಸಹಿಯನ್ನು ಪಡೆಯುವುದರ ಮೂಲಕ ಒಪ್ಪಿಗೆಯನ್ನು ಪಡೆದು ಹೆಚ್ಚಿನ ಬಿಡ್ ಕೂಗಿದ ರೀಲರುಗಳ ಹೆಸರನ್ನು ಹರಾಜು ಚೀಟಿಯಲ್ಲಿ ನಮೂದಿಸಲಾಗುವುದು.

**ಇ-ಹರಾಜು**:2014-15ನೇ ಸಾಲಿನಿಂದ ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ಇ-ಹರಾಜು ಪದ್ಧತಿಯನ್ನು ಅಳವಡಿಸಲಾಗಿದ್ದು, ರೇಷ್ಮೆ ನೂಲು ಬಿಚ್ಚಾಣಿಕೆದಾರರು ತಮ್ಮ ಮೊಬೈಲ್/ಟ್ಯಾಬ್ ಗಳಲ್ಲಿ ಪ್ರತ್ಯೇಕವಾಗಿ ಅಳವಡಿಸಿರುವ ಇ-ಹರಾಜು ಆಪ್ ಮೂಲಕ ತಮ್ಮ ಧಾರಣೆಯನ್ನು ನಮೂದಿಸಿತ್ತಾರೆ. ಇ-ಹರಾಜಿಗೆ ಸಮಯವನ್ನು ನಿಗದಿಪಡಿಸಿದ್ದು, ನಿಗದಿತ ಸಮಯದಲ್ಲಿ ರೇಷ್ಮೆ ನೂಲು ಬಿಚ್ಚಾಣಿಕೆದಾರರು ರೇಷ್ಮೆ ಗೂಡನ್ನು ಭೌತಿಕವಾಗಿ ಪರೀಕ್ಷಿಸಿ ಗುಣಮಟ್ಟಕ್ಕೆ ಅನುಗುಣವಾಗಿ ತಮ್ಮ ದರವನ್ನು ಮೊಬೈಲ್ ಆಪ್‌ನ ಮೂಲಕ ನಮೂದಿಸುತ್ತಾರೆ. ನಿಗದಿತ ಸಮಯದ ನಂತರ ಇ-ಹರಾಜನ್ನು ನಿಲ್ಲಿಸಿ ಇಲಾಖಾ ಸಿಬ್ಬಂದಿಗಳು ರೀಲರ್‌ಗಳು ರೇಷ್ಮೆ ಗೂಡಿಗೆ ನಮೂದಿಸಿರುವ ದರಕ್ಕೆ ರೇಷ್ಮೆ ಬೆಳೆಗಾರರ ಒಪ್ಪಿಗೆಯನ್ನು ಪಡೆಯುತ್ತಾರೆ. ಒಪ್ಪಿಗೆಯಾದ ತಂಡಗಳನ್ನು ತೂಕಕ್ಕೆ ಕಳುಹಿಸಲಾಗುವುದು. ರೇಷ್ಮೆ ಬೆಳೆಗಾರರು ದರಕ್ಕೆ ಒಪ್ಪಿಗೆ ನೀಡದಿದ್ದಲ್ಲಿ ಅಂತಹ ರೇಷ್ಮೆ ಗೂಡಿನ ತಂಡವನ್ನು ಎರಡನೇ ಇ-ಹರಾಜಿಗೆ ಒಳಪಡಿಸುತ್ತಾರೆ.

3. **ರೇಷ್ಮೆ ಗೂಡನ್ನು ತೂಕ ಮಾಡುವುದು:**

ರೇಷ್ಮೆ ಬೆಳೆಗಾರರ ಗೂಡುಗಳನ್ನು ಬಹಿರಂಗ/ಇ-ಹರಾಜಿನ ಮೂಲಕ ಹೆಚ್ಚಿನ ದರ ಕೂಗಿದ/ನಮೂದಿಸಿದ ರೇಷ್ಮೆ ನೂಲು ಬಿಚ್ಚಾಣಿಕೆದಾರರಿಗೆ ಪ್ಲಾಸ್ಟಿಕ್ ಬುಟ್ಟಿಗಳಲ್ಲಿ ಗೂಡುಗಳನ್ನು ತುಂಬಿ ಮಾರುಕಟ್ಟೆಯಲ್ಲಿರುವ ಎಲೆಕ್ಟ್ರಾನಿಕ್ ತೂಕದ ಯಂತ್ರಗಳಲ್ಲಿ ತೂಕ ಮಾಡಿ ರೀಲರುಗಳಿಗೆ ನೀಡಲಾಗುವುದು.

4. **ರೇಷ್ಮೆ ನೂಲು ಬಿಚ್ಚಾಣಿಕೆದಾರರಿಂದ ಹಣ ಸಂಗ್ರಹಣೆ ಹಾಗೂ ರೇಷ್ಮೆ ಬೆಳೆಗಾರರಿಗೆ ಹಣ ಪಾವತಿ:**

ರೇಷ್ಮೆ ನೂಲು ಬಿಚ್ಚಾಣಿಕೆದಾರರಿಂದ ರೇಷ್ಮೆ ಗೂಡಿನ ಹರಾಜಿಗೆ ಮುಂಚಿತವಾಗಿ ಮಾರುಕಟ್ಟೆಯಲ್ಲಿರುವ ನಗದು ಕೌಂಟರ್‌ನಲ್ಲಿ ಮುಂಗಡ ಹಣ ಪಡೆದು ಬಹಿರಂಗ/ಇ-ಹರಾಜಿನಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗುವುದು. ರೀಲರ್‌ಗಳು ಖರೀದಿಸಿದ ರೇಷ್ಮೆ ಗೂಡಿನ ಮೌಲ್ಯವನ್ನು ಸಂಪೂರ್ಣವಾಗಿ ಪಾವತಿಸಿದ ನಂತರ ರೀಲರುಗಳಿಗೆ ರೇಷ್ಮೆ ಗೂಡನ್ನು ನೀಡುವ ವ್ಯವಸ್ಥೆ ಇದೆ. ರೇಷ್ಮೆ ಬೆಳೆಗಾರರಿಗೆ ಮಾರಾಟವಾದ ದಿನವೇ ಹಣ ಪಾವತಿ ಮಾಡಲಾಗುವುದು.

5. **ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ರೇಷ್ಮೆ ಗೂಡಿನ ಪರೀಕ್ಷಾ ಪ್ರಯೋಗಾಲಯಗಳ ಸ್ಥಾಪನೆ**

ರೇಷ್ಮೆ ಬೆಳೆಗಾರರಿಗೆ ವೈಜ್ಞಾನಿಕ ಬೆಲೆ ಒದಗಿಸುವ ದೃಷ್ಠಿಯಿಂದ ರಾಜ್ಯದ ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ರೇಷ್ಮೆ ಗೂಡಿನ ಶ್ರೇಣಿಕರಣವನ್ನು ಮಾಡಲು ಉದ್ದೇಶಿಸಿ ರಾಮನಗರ, ಶಿಡ್ಲಘಟ್ಟ, ಕೊಳ್ಳೇಗಾಲ, ಕನಕಪುರ, ಕೋಲಾರ, ಚನ್ನಪಟ್ಟಣ ಮತ್ತು ಚಿಂತಾಮಣಿ ಮಾರುಕಟ್ಟೆಗಳಲ್ಲಿ ರೇಷ್ಮೆ ಗೂಡು ಪರೀಕ್ಷಾ ಪ್ರಯೋಗಾಲಯದ ಕಟ್ಟಡಗಳನ್ನು ನಿರ್ಮಿಸಲಾಗಿದೆ.

ಕರ್ನಾಟಕ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ, ತಲಘಟ್ಟಪುರ ರವರ ಸಹಯೋಗದೊಂದಿಗೆ ರೇಷ್ಮೆ ಗೂಡು ಶ್ರೇಣೀಕರಣವನ್ನು 2018-19ನೇ ಸಾಲಿನಿಂದ ಕನಕಪುರ ಮಾರುಕಟ್ಟೆಯಲ್ಲಿ ಪ್ರಾಯೋಗಿಕವಾಗಿ ಪ್ರಾರಂಭಿಸಲಾಗಿದೆ. 2019-20ನೇ ಸಾಲಿನಲ್ಲಿ ಎಲ್ಲಾ ಮಾರುಕಟ್ಟೆಗಳಲ್ಲಿ ರೇಷ್ಮೆ ಗೂಡು ಶ್ರೇಣೀಕರಣವನ್ನು ಪ್ರಾರಂಭಿಸಲಾಗುವುದು.

**ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ಇ-ಹಣ ಪಾವತಿ**

ರಾಜ್ಯದ ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ಪಾರದರ್ಶಕ ವಹಿವಾಟಿನ ದೃಷ್ಠಿಯಿಂದ 2018-19ನೇ ಸಾಲಿನಿಂದ ರೇಷ್ಮೆ ಬೆಳೆಗಾರರಿಗೆ ತಾವು ಮಾರಾಟ ಮಾಡಿದ ರೇಷ್ಮೆ ಗೂಡಿನ ಮೌಲ್ಯವನ್ನು ಅವರ ಬ್ಯಾಂಕ್ ಖಾತೆಗೆ ವರ್ಗಾಯಿಸುವ ಇ-ಹಣ ಪಾವತಿಯನ್ನು ಪ್ರಾರಂಭಿಸಲಾಗಿದೆ.

ಇ-ಹಣ ಪಾವತಿಯನ್ನು 2018-19ನೇ ಸಾಲಿನಲ್ಲಿ ರಾಮನಗರ ಮತ್ತು ಕೋಲಾರ ಮಾರುಕಟ್ಟೆಗಳಲ್ಲಿ ಪ್ರಾಯೋಗಿಕವಾಗಿ ಪ್ರಾರಂಭಿಸಲಾಗಿದೆ. 2019-20ನೇ ಸಾಲಿನಲ್ಲಿ ಎಲ್ಲಾ ಮಾರುಕಟ್ಟೆಗಳಲ್ಲಿ ಇ-ಹಣ ಪಾವತಿಯನ್ನು ವಿಸ್ತರಿಸಲಾಗುವುದು.

**ರಾಜ್ಯದಲ್ಲಿರುವ ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆ ವಿವರಗಳು**

| ಕ್ರ. ಸಂ | ಜಿಲ್ಲೆ | ತಾಲ್ಲೂಕು | ಕ್ರ. ಸಂ | ಮಾರುಕಟ್ಟೆಯ ಹೆಸರು |
|---|---|---|---|---|
| **ವಾಣಿಜ್ಯ ಮಾರುಕಟ್ಟೆಗಳು** | | | | |
| 1 | ಬೆಂಗಳೂರು ಗ್ರಾಮಾಂತರ | ದೇವನಹಳ್ಳಿ | 1 | ವಿಜಯಪುರ |
| 2 | ಬಾಗಲಕೋಟೆ | ಮುಧೋಳ | 2 | ಮುಧೋಳ |
| | | ಹುನಗುಂದ | 3 | ಇಳಕಲ್ |
| 3 | ಬೆಳಗಾವಿ | ಅಥಣಿ | 4 | ಅಥಣಿ |
| | | ಗೋಕಾಕ್ | 5 | ಗೋಕಾಕ್ |
| 4 | ಬಳ್ಳಾರಿ | ಕೂಡ್ಲಿಗಿ | 6 | ಕೂಡ್ಲಿಗಿ |
| 5 | ಬೀದರ್ | ಹುಮ್ನಾಬಾದ್ | 7 | ಹುಮ್ನಾಬಾದ್ |
| 6 | ಬಿಜಾಪುರ | ಬಿಜಾಪುರ | 8 | ಬಿಜಾಪುರ |
| 7 | ಚಾಮರಾಜನಗರ | ಚಾಮರಾಜನಗರ | 9 | ಚಾಮರಾಜನಗರ |
| | | ಚಾಮರಾಜನಗರ | 10 | ಸಂತೆಮರಹಳ್ಳಿ |
| | | ಚಾಮರಾಜನಗರ | 11 | ಹರವೆ |
| | | ಕೊಳ್ಳೇಗಾಲ | 12 | ಕೊಳ್ಳೇಗಾಲ |
| | | ಕೊಳ್ಳೇಗಾಲ | 13 | ಹನೂರು |
| 8 | ಮೈಸೂರು | ಮೈಸೂರು | 14 | ಮೈಸೂರು |
| | | ತಿ. ನರಸೀಪುರ | 15 | ತಿ. ನರಸೀಪುರ |
| 9 | ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ | 16 | ಚಿಕ್ಕಬಳ್ಳಾಪುರ |
| | | ಚಿಂತಾಮಣಿ | 17 | ಚಿಂತಾಮಣಿ |
| | | ಶಿಡ್ಲಘಟ್ಟ | 18 | ಶಿಡ್ಲಘಟ್ಟ |
| | | ಶಿಡ್ಲಘಟ್ಟ | 19 | ಹೆಚ್. ಕ್ರಾಸ್ |

| ಕ್ರ. ಸಂ | ಜಿಲ್ಲೆ | ತಾಲ್ಲೂಕು | ಕ್ರ. ಸಂ | ಮಾರುಕಟ್ಟೆಯ ಹೆಸರು |
|---|---|---|---|---|
| 10 | ದಕ್ಷಿಣ ಕನ್ನಡ | ಬಂಟ್ವಾಳ | 20 | ಬಿ.ಸಿ.ರೋಡ್ |
| 11 | ದಾವಣಗೆರೆ | ದಾವಣಗೆರೆ | 21 | ದಾವಣಗೆರೆ |
| 12 | ದಾರವಾಡ | ದಾರವಾಡ | 22 | ರಾಯಾಪುರ |
| 13 | ಗದಗ | ಶಿರಹಟ್ಟಿ | 23 | ಶಿರಹಟ್ಟಿ |
| 14 | ಗುಲ್ಬರ್ಗ | ಗುಲ್ಬರ್ಗ | 24 | ಗುಲ್ಬರ್ಗ |
| | | ಜೇವರ್ಗಿ | 25 | ಜೇವರ್ಗಿ |
| 15 | ಕೋಲಾರ | ಕೋಲಾರ | 26 | ಕೋಲಾರ |
| | | ಕೋಲಾರ | 27 | ಕ್ಯಾಲನೂರು |
| | | ಶ್ರೀನಿವಾಸಪುರ | 28 | ಶ್ರೀನಿವಾಸಪುರ |
| | | ಮುಳಬಾಗಿಲು | 29 | ಮುಳಬಾಗಿಲು |
| 16 | ಮಂಡ್ಯ | ಮಳವಳ್ಳಿ | 30 | ಮಳವಳ್ಳಿ |
| 17 | ರಾಮನಗರ | ರಾಮನಗರ | 31 | ರಾಮನಗರ |
| | | ಚನ್ನಪಟ್ಟಣ | 32 | ಚನ್ನಪಟ್ಟಣ |
| | | ಕನಕಪುರ | 33 | ಕನಕಪುರ |
| 18 | ರಾಯಚೂರು | ಲಿಂಗಸೂಗೂರು | 34 | ಲಿಂಗಸೂಗೂರು |
| 19 | ಹಾವೇರಿ | ಹಾವೇರಿ | 35 | ಹಾವೇರಿ |

## ದ್ವಿತಳಿ ರೇಷ್ಮೆ ಗೂಡಿನ ಮಾರುಕಟ್ಟೆಗಳು

| ಕ್ರ. ಸಂ | ಜಿಲ್ಲೆ | ತಾಲ್ಲೂಕು | ಕ್ರ. ಸಂ | ಮಾರುಕಟ್ಟೆಯ ಹೆಸರು |
|---|---|---|---|---|
| 1 | ಬೆಂಗಳೂರು ನಗರ | ಬೆಂಗಳೂರು ಉತ್ತರ | 36 | ಬೆಂಗಳೂರು |
| | | ಆನೇಕಲ್ | 37 | ಸರ್ಜಾಪುರ |
| | | ಆನೇಕಲ್ | 38 | ಅತ್ತಿಬೆಲೆ |
| 2 | ಬೆಳಗಾವಿ | ಬೆಳಗಾವಿ | 39 | ಬೆಳಗಾವಿ |
| 3 | ಹಾಸನ | ಹಾಸನ | 40 | ಹಾಸನ |
| 4 | ಕೊಡಗು | ಸೋಮವಾರಪೇಟೆ | 41 | ಕುಶಾಲನಗರ |
| 5 | ಮಂಡ್ಯ | ಕೆ.ಆರ್.ಪೇಟೆ | 42 | ಕೆ.ಆರ್.ಪೇಟೆ |
| 6 | ಶಿವಮೊಗ್ಗ | ಶಿವಮೊಗ್ಗ | 43 | ಶಿವಮೊಗ್ಗ |
| 7 | ತುಮಕೂರು | ತುಮಕೂರು | 44 | ತುಮಕೂರು |
| 8 | ಉತ್ತರ ಕನ್ನಡ | ಶಿರಸಿ | 45 | ಶಿರಸಿ |

## ಮೈಸೂರು ತಳಿ ಬಿತ್ತನೆ ರೇಷ್ಮೆ ಗೂಡಿನ ಮಾರುಕಟ್ಟೆಗಳು

| ಕ್ರ. ಸಂ | ಜಿಲ್ಲೆ | ತಾಲ್ಲೂಕು | ಕ್ರ. ಸಂ | ಮಾರುಕಟ್ಟೆಯ ಹೆಸರು |
|---|---|---|---|---|
| 1 | ರಾಮನಗರ | ಮಾಗಡಿ | 46 | ಮಾಗಡಿ |
| | | ಮಾಗಡಿ | 47 | ಕುದೂರು |
| | | ಮಾಗಡಿ | 48 | ಸೋಲೂರು |
| | | ಮಾಗಡಿ | 49 | ವೀರೇಗೌಡನದೊಡ್ಡಿ |
| 2 | ತುಮಕೂರು | ತುಮಕೂರು | 50 | ಹೆಬ್ಬೂರು |
| | | ಕುಣಿಗಲ್ | 51 | ಕುಣಿಗಲ್ |
| | | ಕುಣಿಗಲ್ | 52 | ಸಂತೆಮಾವತ್ತೂರು |
| | | ಕುಣಿಗಲ್ | 53 | ಕೆಂಪನಹಳ್ಳಿ |
| | | ಕುಣಿಗಲ್ | 54 | ಹುಲಿಯೂರುದುರ್ಗ |
| | | ಕುಣಿಗಲ್ | 55 | ಚೌಡನಕುಪ್ಪೆ |